# ರಂಗಕಲಾವಿದೆಯರಿಗೆ ಪುನರ್ವಸತಿಯ ಅಗತ್ಯ

**ರವಿ ಎನ್.ಸಿ.**

ಸಹ ಪ್ರಾಧ್ಯಾಪಕರು, ಸರ್ಕಾರಿ ವಿಜ್ಞಾನ ಕಾಲೇಜು (ಸ್ವಾಯತ್ತ ), ಹಾಸನ.

DOI: https://doi.org/10.5281/zenodo.17254861

## ABSTRACT:

ಮಾನವನ ಸೃಜನಶೀಲ ಅಭಿವ್ಯಕ್ತಿಗಳಲ್ಲಿ ರಂಗಕಲೆ ಬಹಳ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಅದು ಪರಿಣಾಮಕಾರಿಯಾದ ಮಾಧ್ಯಮವೂ ಹೌದು. ಎಲ್ಲ ಆಯಾಮಗಳಲ್ಲೂ ಗ್ರಹಿಸಿದಾಗ ರಂಗಕಲೆ ಸಾಂಸ್ಕೃತಿಕವಾದ ಮಹತ್ವವನ್ನು ಪಡೆದುಕೊಂಡಿದೆ. ಆದರೆ ತಲೆಮಾರು ಕಳೆದಂತೆ ಕಾಲಚಕ್ರ ಉರುಳಿದಂತೆ ಆದ ಬದಲಾವಣೆಗಳಿಂದ ಈ ರಂಗಭೂಮಿಯಲ್ಲಿ ದುಡಿಯುವ ಕಲಾವಿದೆಯರಿಗೆ ಸಿಗಬೇಕಾದ ಸೌಲಭ್ಯಗಳು, ಆ ಕಲಾವಿದರಿಂದ ಬಹುದೂರ ಸರಿದಿವೆ. ಯಾಕೆ ನಮ್ಮ ಸಮಾಜದಲ್ಲಿ ಈ ರೀತಿಯಾದ ವೈಪರೀತ್ಯಗಳು ನಡೆಯುತ್ತದೆ ಎಂಬುದನ್ನು ಅರಿಯಲು ನಾನು ಪ್ರಯತ್ನಿಸುತ್ತಿದ್ದೇನೆ. ಇಲ್ಲಿ ಪ್ರಧಾನವಾಗಿ ಗಮನಿಸುವುದು ರಂಗಕಲಾವಿದೆಯರಿಗೆ ಸಿಗಬೇಕಾದ ಪುನರ್ವಸತಿಗಳ ಕುರಿತು.

ಸರ್ಕಾರ ವೃತ್ತಿ ಕಂಪನಿಗಳ ಉಳಿವಿಗೆ ಯಾವುದೇ ನಿಶ್ಚಿತವಾದ ಯೋಜನೆಯನ್ನು ರೂಪಿಸಿಲ್ಲವಾದ್ದರಿಂದ ಆ ಕಂಪನಿಗಳ ಕಲಾವಿದೆಯರೂ ತಮ್ಮ ವೃದ್ಧಾಪ್ಯದಲ್ಲಿ ದಾರಿ ಕಾಣದೆ ಕಂಗಾಲಾಗಿದ್ದಾರೆ. ರಂಗಕಲಾವಿದೆಯರು ವೃದ್ಧಾಪ್ಯದಲ್ಲಿ ಬದುಕಿನ ನಿಶ್ಚಿತ ದಾರಿ ಕಾಣದೆ ಕಂಗೆಟ್ಟಿದ್ದಾರೆ. ಸರ್ಕಾರ ರಂಗಕಲಾವಿದೆಯರ ಉಳಿವಿಗೆ ನಿಶ್ಚಿತವಾದ ಯೋಜನೆಗಳನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಹಾಕಿಕೊಂಡು ಸರಿಯಾಗಿ ಕಾರ್ಯಗತಗೊಳಿಸಿ ರಂಗಕಲಾವಿದೆಯರ ವೃದ್ಧಾಪ್ಯದ ಸಮಸ್ಯೆಗಳಿಗೆ ಪುನರ್ವಸತಿ ನೀಡಬೇಕಿದೆ. ಚಿಂದೋಡಿ ಲೀಲಾರಂತಹ ಕಂಪನಿ ಕಲಾವಿದೆ ಕರ್ನಾಟಕ ರಾಜ್ಯ ನಾಟಕ ಅಕಾಡೆಮಿ ಅಧ್ಯಕ್ಷರಾಗಿದ್ದಾಗ ಕೆಲವು ರಂಗಕಲಾವಿದರ ಮಾಹಿತಿ ಕಲೆಹಾಕಿ ರಂಗಕಲಾವಿದರಿಗೆ ಸ್ವಲ್ಪ ಮಟ್ಟಿನ ಆರ್ಥಿಕ ನೆರವನ್ನು ಒದಗಿಸಿದ್ದರು.

## KEYWORDS:

ರಂಗಭೂಮಿ, ಕಲೆ, ಪುನರ್ವಸತಿ, ಅಭಿವ್ಯಕ್ತಿ, ಸೃಜನಶೀಲತೆ, ಯೋಜನೆ, ಕಂಪನಿ, ನಾಟಕ.

ಕಲಾವಿದ, ಕಲಾವಿದೆಯರಿಗೆ ಅಥವಾ ನಾಟಕ ಕಂಪನಿಗಳಿಗೆ ನಾಟಕ ಪ್ರದರ್ಶನಕ್ಕೆ ಹೋದಕಡೆ ಕಡಿಮೆ ದರದಲ್ಲಿ ಆಹಾರ ಪದಾರ್ಥಗಳು ದೊರೆಯುವಂತಾಗಬೇಕು. ಕಲಾವಿದೆಯರ ಮಕ್ಕಳಿಗೆ ಯೋಗ್ಯ ಶಿಕ್ಷಣ ದೊರೆಯುವಂತೆ ವ್ಯವಸ್ಥೆ ಮಾಡಬೇಕು. ಸರ್ಕಾರಿ ಹಂತದ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ಉನ್ನತ ಶಿಕ್ಷಣದ ಹಂತದಲ್ಲಿ ರಂಗಕಲಾವಿದೆಯರ ಮಕ್ಕಳಿಗೆ ಮೀಸಲಾತಿಯನ್ನು ಆದ್ಯತೆಯಿಂದ ನೀಡಬೇಕು. ಸರ್ಕಾರಿ ಹಂತದ ವಸತಿ ನಿಲಯಗಳಲ್ಲಿ, ರಂಗಕಲಾವಿದ/ ರಂಗಕಲಾವಿದೆಯರ ಮಕ್ಕಳಿಗೆ ಮೀಸಲಾತಿ ನೀಡಿ ಶೈಕ್ಷಣಿಕವಾಗಿ ಅವರನ್ನು ಮೇಲೆತ್ತುವ ಪ್ರಯತ್ನಗಳಾಗಬೇಕು. ರಂಗಭೂಮಿಯ ನಟ ಅಥವಾ ನಟಿ ಜೀವನ ಪರ್ಯಂತ ಯಾವ ಕಂಪನಿಗಳ ಏಳಿಗೆಗೆ ದುಡಿದಿರುತ್ತಾರೋ ಅಂತಹ ಕಂಪನಿಗಳು ಕನಿಷ್ಟ ಪಕ್ಷ ವೃದ್ಧಾಪ್ಯದಲ್ಲಿರುವ, ಅನಾರೋಗ್ಯದಲ್ಲಿರುವ ರಂಗಕಲಾವಿದೆಯರನ್ನು ಮಾನವೀಯ ದೃಷ್ಟಿಯಿಂದ ನೋಡಬೇಕು. ಕಲಾತ್ಮಕ ಕನ್ನಡ ಸಿನಿಮಾಗಳಿಗೆ ನೀಡುವಂತೆಯೇ ನಾಟಕಗಳಿಗೂ ಸಹಾಯಧನ ನೀಡಬೇಕು. ಹವ್ಯಾಸೀ ಮತ್ತು ವೃತ್ತಿ ರಂಗಭೂಮಿಯ ಕಂಪನಿಗಳೆರಡೂ ತಮ್ಮ ಕಂಪನಿ ಕಲಾವಿದರ, ಕಲಾವಿದೆಯರ ಮುಂದಿನ ವೃದ್ಧಾಪ್ಯದ ಬದುಕಿಗೆ ಅನುಕೂಲವಾಗುವಂತೆ ಕನಿಷ್ಟ ಪಕ್ಷ ಆರೋಗ್ಯ ವಿಮೆಯನ್ನು ಮಾಡಿಸಿ ಕೊಡಬೇಕು. ಈಗಲಾದರೂ ಇದರ ಬಗ್ಗೆ ಪ್ರಾಮಾಣಿಕವಾಗಿ ಯೋಚಿಸುವಂತಾಗಬೇಕು. ರಂಗಕಲಾವಿದರು ತಮ್ಮ ವೃದ್ಧಾಪ್ಯದ ಬದುಕಿನಲ್ಲಿ, ಅನಾರೋಗ್ಯದ ಸಂದರ್ಭಗಳಲ್ಲಿ ಗಲಿಬಿಲಿಗೊಳ್ಳದಂತೆ ಅವರಿವರ ಮರ್ಜಿಗೆ ಕಾಯುತ್ತಾ ಬದುಕದಂತೆ ಅವರ ವೃದ್ಧಾಪ್ಯದ ಬದುಕಿನಲ್ಲಿ ನತದೃಷ್ಟ ಕಲಾವಿದರಂತೆ ಬದುಕುವಂತಾಗದೆ ರಂಗಕಲಾವಿದೆಯರಲ್ಲಿ ಭರವಸೆಯನ್ನು ತುಂಬುವ ಕೆಲಸಗಳಾಗಬೇಕು. ವೃದ್ಧಾಪ್ಯದಲ್ಲಿರುವ ಅನೇಕ ರಂಗಭೂಮಿಯ ನಟ, ನಟಿಯರನ್ನು ಸಾರ್ವಜನಿಕ ಸಭೆ ಸಮಾರಂಭಗಳಿಗೆ ಆಹ್ವಾನಿಸಿ ಗೌರವಿಸಿದಾಗ ಅವರಿಗೆ ಶಾಲು, ಹಾರ, ತುರಾಯಿ ಹಾಕುವ ಬದಲು ಕೆಲಮಟ್ಟಿಗಾದರೂ ಹಣಕಾಸಿನ ನೆರವನ್ನು ನೀಡಿದರೆ ಅವರ ಬದುಕಿಗೆ ಅದು ಆಸರೆಯಾಗುತ್ತದೆ. ರಂಗಕಲಾವಿದೆಯರಿಗಂತೂ ವೃದ್ಧಾಪ್ಯದಲ್ಲಿ ಯಾವುದೇ ಅವಕಾಶಗಳಿರುವುದಿಲ್ಲ. ಅವಕಾಶಗಳಿಲ್ಲದ್ದರಿಂದ ಅವರ ಆರ್ಥಿಕ ಪರಿಸ್ಥಿತಿ ಶೋಚನೀಯವಾಗಿರುತ್ತದೆ. ಅದೇ ಸಂದರ್ಭಗಳಲ್ಲಿ ಅವರಿಗೆ ಅನಾರೋಗ್ಯದ ಸಮಸ್ಯೆಗಳು ಕಾಡುವುದರಿಂದ ಅಭದ್ರತೆಯ ಭಾವ ಅವರನ್ನು ವಿಪರೀತವಾಗಿ ಕಾಡುತ್ತದೆ.

ಮಳವಳ್ಳಿ ಸುಂದರಮ್ಮನಂತಹ ಹಿರಿಯ ಕಲಾವಿದೆಯರ ವೃದ್ಧಾಪ್ಯದಲ್ಲಿನ ದಾರುಣ ಪರಿಸ್ಥಿತಿಯನ್ನು ನೋಡಿ ಅಂದಿನ ಅವರ ಸಮಕಾಲೀನ ರಂಗಕಲಾವಿದರು ಅವರ ನೆರವಿಗಾಗಿ ಒಂದು ಬೆನಿಫಿಟ್ ನಾಟಕವಾಡಿ ಅದರಲ್ಲಿ ಸಂಗ್ರಹವಾದ ಹಣವನ್ನು ಅವರಿಗೆ ಅರ್ಪಿಸಿದ್ದಾರೆ. ಹೀಗೆ ಕಲಾವಿದೆಯರಿಗೆ ಅವರ ನಿವೃತ್ತಿಯ

ಜೀವನದಲ್ಲಿ ಸಭೆ, ಸಮಾರಂಭಗಳಲ್ಲಿ ಸನ್ಮಾನವಾಗುತ್ತಿದ್ದರೂ ತಮ್ಮ ಹೊಟ್ಟೆಪಾಡಿನ ಪ್ರಶ್ನೆ ಅವರಿಗೆ ಸದಾ ಕಾಡುತ್ತಿತ್ತು. "ಹೆಸರಾಂತ ಅಭಿನೇತ್ರಿಯಾಗಿ, ಗಾಯಕಿಯಾಗಿ, ಪ್ರಸಿದ್ಧ ವ್ಯಕ್ತಿ ಮಂಡಳಿಯೊಂದರ ನೇತೃತ್ವ ವಹಿಸಿ, ನಲವತ್ತು ವರ್ಷಗಳ ಕಾಲ ದುಡಿದು, ಇಂದು ವಿಶ್ರಾಂತ ಜೀವನ ನಡೆಸುತ್ತಿರುವ ನನಗೆ, ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿ ಕೊಡ ಮಾಡುತ್ತಿರುವ ನೂರು ರೂಪಾಯಿ ಮಾಸಿಕ ವೇತನ ಜೀವನದ ಏಕೈಕ ಆಧಾರವಾಗಿದೆ"[1] ಎಂಬ ಮಳವಳ್ಳಿ ಸುಂದರಮ್ಮರ ಅಳಲು ಕೇವಲ ಅವರೊಬ್ಬರದ್ದಾಗಿರದೆ ಎಲ್ಲಾ ರಂಗಕಲಾವಿದರ ಧ್ವನಿಯಂತಿದೆ. ರಂಗಕಲಾವಿದೆಯರ ಪುನರ್ವಸತಿಯ ಅಗತ್ಯವನ್ನು, ಜರೂರನ್ನು ಈ ಮಾತುಗಳು ನಮಗೆ ಮನದಟ್ಟು ಮಾಡಿಕೊಡುತ್ತವೆ. ಜೀವನದ ಉದ್ದಕ್ಕೂ ಅಲೆಮಾರಿಗಳಾಗಿಯೇ ಬದುಕುತ್ತಿರುವ ರಂಗಕಲಾವಿದೆಯರ ಮಕ್ಕಳಿಗೆ ಕನಿಷ್ಟ ಶಿಕ್ಷಣವನ್ನು, ವಸತಿಯನ್ನು ಒದಗಿಸಿಕೊಡಬೇಕಾದ ಅಗತ್ಯವಿದೆ. ರಂಗಕಲಾವಿದೆಯರ ನಿವೃತ್ತಿಯ ಅಭದ್ರತೆಯ ನೇಪಥ್ಯದ ಬದುಕಿಗೆ ರಂಗಾಸಕ್ತರು, ಕಲಾಪ್ರೇಮಿಗಳು ಆಸರೆಯಾಗಬೇಕಾಗಿದೆ. ಪ್ರತೀ ರಂಗಕಲಾವಿದೆಯರು ಆರ್ಥಿಕವಾಗಿ ಪರಿಧೀಯ ಸ್ಥಿತಿಯಲ್ಲಿದ್ದು ಸರ್ಕಾರ ಕೊಡುವ ಮಾಸಾಶನವನ್ನು ಬಯಸುವ ಸ್ಥಿತಿಯಲ್ಲಿದ್ದಾರೆ. ಪ್ರತಿಭಾನ್ವಿತ ರಂಗಕಲಾವಿದೆಯರನ್ನು ಗುರುತಿಸಿ ಅವರಿಗೆ ನೆಮ್ಮದಿ ನೀಡುವಂತೆ ಪ್ರಶಸ್ತಿ ಗೌರವಗಳನ್ನು ಸಲ್ಲಿಸಬೇಕಾದ ಅಗತ್ಯವಿದೆ. ಆದರೆ ಈ ಎಲ್ಲಾ ಕಾರ್ಯಕ್ರಮ ಯೋಜನೆಗಳನ್ನು ಆಳುವ ಸರ್ಕಾರವೊಂದೇ ಮಾಡಲಿ ಎಂದು ಬಯಸಬಾರದು. ಸಮಾಜದ ಗಣ್ಯವ್ಯಕ್ತಿಗಳು, ಕಲೋಪಾಸಕರು, ಕಲಾಪ್ರೇಮಿಗಳು, ಸರ್ಕಾರೇತರ ಸಂಸ್ಥೆಗಳು, ಕೊಡುಗೈದಾನಿಗಳು ಇವರ ಪುನರ್ವಸತಿಗೆ ಕೈ ಜೋಡಿಸಬೇಕಾಗಿದೆ. ಆ ಮೂಲಕ ನೇಪಥ್ಯದಲ್ಲಿರುವ, ಅತಂತ್ರ ಸ್ಥಿತಿಯಲ್ಲಿರುವ, ವಯಸ್ಸಾಗಿರುವ ರಂಗಕಲಾವಿದೆಯರ ಬದುಕಿನಲ್ಲಿ ಆತ್ಮವಿಶ್ವಾಸವನ್ನು ಮೂಡಿಸಬೇಕಾದ ಅಗತ್ಯವಿದೆ. ಈ ಎಲ್ಲಾ ಕಾರ್ಯಗಳ ಮೂಲಕ ಒಂದು ಕಾಲದಲ್ಲಿ ರಂಗಭೂಮಿಯಲ್ಲಿ ಸಂಸ್ಕೃತಿಯ ವಕ್ತಾರರಾಗಿ ದುಡಿದ ರಂಗಕಲಾವಿದೆಯರ ನಿವೃತ್ತಿಯ ನಂತರದ ಅವರ ಬದುಕಿನ ಎದೆಯ ಸಂಕಟಕ್ಕೆ ದನಿಯಾಗಬೇಕಾಗಿದೆ. ರಂಗಭೂಮಿ ಮತ್ತು ಸಿನಿಮಾ ಜಗತ್ತಿನ ಸೃಷ್ಟಿಯೇ ವಿಚಿತ್ರವಾದುದು. ರಂಗಭೂಮಿಯ ರಂಗಮಂಟಪದಿಂದ ರಂಗಕಲಾವಿದೆಯರು ಪಕ್ಕಕ್ಕೆ ಸರಿದರೆ ತೆರೆಯ ಮರೆಗೆ ಸರಿದು ಹೋಗಲು ಹೆಚ್ಚು ಸಮಯ ಬೇಕಾಗುವುದಿಲ್ಲ. ಆದ್ದರಿಂದ ಅವರು ಬದುಕಿದ್ದಾಗಲೇ ಅವರಿಗೆ ಪುನರ್ವಸತಿ ಕಲ್ಪಿಸಬೇಕಾದ ತುರ್ತು, ಜರೂರು ಇದೆ.

ಇನ್ನು ಕರ್ನಾಟಕ ನಾಟಕ ಅಕಾಡೆಮಿ ತನ್ನ ಸೀಮಿತ ಹಣಕಾಸಿನ ಮತ್ತು ಸೀಮಿತ ಅಧಿಕಾರಿ ಸಿಬ್ಬಂದಿಗಳ ವ್ಯಾಪ್ತಿಯಲ್ಲಿ ತಕ್ಕ ಮಟ್ಟಿಗೆ ಕೆಲಸ ಮಾಡಿಕೊಂಡು ಬಂದಿರುತ್ತದೆ. ಎಲ್ಲೆಲ್ಲಿ ನಾಟಕಗಳ ಬೆಳವಣಿಗೆಗೆ ಸೂಕ್ತ ಪರಿಸರವಿರುತ್ತದೆಯೋ

ಅಲ್ಲಲ್ಲಿ ಅಂದರೆ ಒಂದಷ್ಟು ಆಯ್ದ ಕೇಂದ್ರಗಳಲ್ಲಿ ಪದೇ ಪದೇ ನಾಟಕ ಚಟುವಟಿಕೆಗಳನ್ನು ಏರ್ಪಡಿಸುವ ಮೂಲಕ ಅಲ್ಲಿ ನಾಟಕದ ಬಗ್ಗೆ ಪ್ರೋತ್ಸಾಹದಾಯಕ ಕೃಷಿ ಕೈಗೊಳ್ಳಲು ನೆರವಾಗುತ್ತದೆ. ಉದಾಹರಣೆಗೆ ಮರಿಯಮ್ಮ ಹಳ್ಳಿ ಎಂಬುದೊಂದು ಕಲಾಗ್ರಾಮ. ಅಲ್ಲಿ ನೂರಾರು ರಂಗಕಲಾವಿದೆಯರು ನೆಲೆ ನಿಂತಿದ್ದಾರೆ. ಅಂಥಹ ಕಡೆ ವಿಶೇಷ ಯೋಜನೆಗಳ ಕೆಲ ಕಾರ್ಯಕ್ರಮಗಳನ್ನು ನಾಟಕ ಅಕಾಡೆಮಿ ತನ್ನ ಕೆಲಸಗಳನ್ನು ಅಲ್ಲಿ ವಿಸ್ತರಿಸಿದರೆ, ಅಲ್ಲಿರುವ ರಂಗಕಲಾವಿದೆಯರಿಗೆ ಇದರಿಂದ ಹೆಚ್ಚು ಅನುಕೂಲವಾಗಬಹುದು. ವೃತ್ತಿ ರಂಗಭೂಮಿಗೆ ಈಗಾಗಲೇ ಒಂದು ಪ್ರೇಕ್ಷಕ ವರ್ಗವಿದೆ. ತಾವು ಹೊಸದನ್ನು ಪ್ರಯೋಗಕ್ಕೆ ಒಳಪಡಿಸಿದರೆ ಹೊಸದ್ದಕ್ಕೆ ಒಗ್ಗಿಕೊಳ್ಳದಿರುವ ಪ್ರೇಕ್ಷಕರನ್ನು ತಾವು ಕಳೆದುಕೊಳ್ಳುತ್ತೇವೆ ಎಂಬ ಭಯ ಅವರನ್ನು ಕಾಡುತ್ತದೆ. ವೃತ್ತಿರಂಗದ ನಾಟಕ ಪ್ರಯೋಗಗಳು ಕೂಡ ಏಕತಾನತೆಯನ್ನು ಬಿಟ್ಟು ಹೊಸತನಕ್ಕೆ ಹೊಂದಿಕೊಳ್ಳಬೇಕಿದೆ. ಆ ಮೂಲಕ ರಂಗಕಲಾವಿದೆಯರು ಒಂದೇ ಪಾತ್ರದಲ್ಲಿ ಅಭಿನಯಿಸುವುದನ್ನು ಬಿಟ್ಟು ಬದಲಾದ ಪ್ರೇಕ್ಷಕನ ಮನೋಧರ್ಮಕ್ಕನುಸಾರವಾಗಿ ಹೊಸತನಕ್ಕೆ ತೆರೆದುಕೊಳ್ಳಬೇಕಾದ ಅಗತ್ಯವಿದೆ.

ವೃತ್ತಿ ರಂಗಭೂಮಿ ಕಲಾವಿದೆಯರ ಆತ್ಮಕಥೆಗಳಲ್ಲಿ ದಾಖಲಾಗಿರುವಂತೆ ಮಳೆಗಾಲದಲ್ಲಿ ಅವರು ನಾಟಕ ಪ್ರದರ್ಶನಗಳಿಲ್ಲದೆ, ಖಾಲಿ ಕೈಲಿ ಕುಳಿತು ಅಭದ್ರತೆ ಅನುಭವಿಸಿದ್ದಾರೆ. ಕೆಲವು ಕಂಪನಿಗಳು, ಮಳೆ, ಗಾಳಿ ಬೆಂಕಿಯಂತಹ ಪ್ರಾಕೃತಿಕ ವಿಕೋಪಗಳಿಗೆ ಸಿಲುಕಿ ರಂಗಭೂಮಿಯ ಎಲ್ಲಾ ಪರಿಕರಗಳು ನಾಶವಾಗಿರುವುದನ್ನು ರಂಗಕಲಾವಿದೆಯರು ಉಲ್ಲೇಖಿಸಿದ್ದಾರೆ. ಹೀಗೆ ಶಾಶ್ವತ ರಂಗಮಂದಿರಗಳನ್ನು ನಿರ್ಮಿಸುವುದರಿಂದ ಅವರ ವಾರ್ಷಿಕ ಆದಾಯವೂ ಹೆಚ್ಚುತ್ತದೆ. ‘‘ಹೆಚ್ಚುಕಡಿಮೆ ಒಂದೊಂದು ಮಳೆಗಾಲವು ಒಂದೊಂದು ನಾಟಕ ಕಂಪನಿಯನ್ನು ಮುಚ್ಚಿದೆ ಎನ್ನುವುದು ಐತಿಹಾಸಿಕ ಸತ್ಯ’’[2] ಎಂಬ ಬಿ.ವಿ.ವೈಕುಂಠ ರಾಜು ರವರ ಮಾತು ವೃತ್ತಿ ರಂಗಕಲಾವಿದೆಯರ ಆತ್ಮಕಥೆಗಳನ್ನು ಓದಿದಾಗ ಅಕ್ಷರಶಃ ಸತ್ಯವೆನಿಸುತ್ತದೆ. ‘‘ಈ ಮೊದಲೇ ಚಿತ್ರರಂಗಕ್ಕೆ ಸಹಾಯಧನ ಕೊಡುವ ಯೋಜನೆ ಜಾರಿಗೆ ತಂದಾಗಲೇ ರಂಗಭೂಮಿಗೂ ಸೂಕ್ತ ನೆರವು ನೀಡುವ ಯೋಜನೆಯೊಂದನ್ನು ಸರ್ಕಾರ ಪ್ರಾರಂಭಿಸಿದ್ದರೆ ಇವತ್ತು ನಮ್ಮ ಚಿತ್ರರಂಗ ಸಾಧಿಸಿರುವ ಪ್ರಗತಿಗಿಂತ ಎಷ್ಟೋ ಹೆಚ್ಚಿನದನ್ನು ರಂಗಭೂಮಿ ಸಾಧಿಸಬಹುದು ಎನ್ನಿಸುತ್ತದೆ’’[3] ಎಂಬ ಕೆ.ವಿ.ಸುಬ್ಬಣ್ಣನವರ ಮಾತು ಚಲನಚಿತ್ರಕ್ಕೆ ಸಹಾಯಧನ ನೀಡುವ ಯೋಜನೆಯನ್ನು ರಂಗಭೂಮಿಗೂ ಸರ್ಕಾರ ವಿಸ್ತರಿಸಬೇಕಾಗಿತ್ತು ಎಂಬ ಆಶಯವನ್ನು ಹೇಳುತ್ತದೆ. ರಂಗಭೂಮಿಗೆ ಸರ್ಕಾರ ಕೊಡಬಹುದಾದ ಸಹಾಯವನ್ನು ಚಿತ್ರರಂಗಕ್ಕೆ ಕಲ್ಪಿಸಿದ ಯೋಜನೆಯ ನೆರಳಲ್ಲಿ ಯೋಚಿಸುವುದನ್ನು ಬಿಟ್ಟು ಪ್ರತ್ಯೇಕವಾಗಿ, ರಂಗಭೂಮಿಗೆ ಪ್ರತ್ಯೇಕವಾಗಿರುವ ಅದರದೇ ಸಮಸ್ಯೆಗಳ ಬೆಳಕಿನಲ್ಲಿ ಯೋಚಿಸಬೇಕಾದುದು ಅಗತ್ಯ.

ನಾಟಕ ಅಕಾಡೆಮಿಯ ಅಧ್ಯಕ್ಷರಾಗಿ ಸಮರ್ಥವಾಗಿ ಕೆಲಸ ಮಾಡಿದ ರಂಗಕಲಾವಿದೆ ಚಿಂದೋಡಿ ಲೀಲಾ ತಮ್ಮ ಆತ್ಮಕಥೆಯಲ್ಲಿ ರಂಗಕಲಾವಿದರ ಪುನರ್ವಸತಿ ಬಗ್ಗೆ ಹೀಗೆ ಹೇಳಿದ್ದಾರೆ. ನಾಟಕ ಕಂಪನಿಗಳಲ್ಲಿ "ಮಾಲೀಕರಿಗೇನೋ ಲಾಭ ಇಲ್ಲವೇ ನಷ್ಟ ಎರಡರಲ್ಲಿ ಒಂದಾಗುತ್ತದೆ. ಆದರೆ ಇತರೆ ಕಲಾವಿದರಿಗೆ ಭವಿಷ್ಯವೇ ಶೂನ್ಯ. ಅವರ ಭವಿಷ್ಯಕ್ಕೆ ವಿಮೆ ಮಾಡಿಸುವಂತಹ ಯೋಜನೆಗಳು ಯಾವ ಕಾಲಕ್ಕೂ ಆಗಲಿಲ್ಲ. ಈ ಕೆಲಸವನ್ನು ಮಾಲೀಕರು ಮಾಡಬೇಕಾಗಿತ್ತೇ? ಗಳಿಕೆ ಅಧಿಕವಾಗಿದ್ದಾಗ ಆ ಕೆಲಸವನ್ನು ಯಾರು ಮಾಡಿಕೊಳ್ಳಬೇಕಿತ್ತು? ಮಾಲೀಕರೇ? ಅಥವಾ ಕಲಾವಿದರೇ? ಅಥವಾ ಸರ್ಕಾರವೇನಾದರೂ ಮಧ್ಯಸ್ಥಿಕೆ ವಹಿಸಬೇಕಿತ್ತೇ? ಒಟ್ಟಿನಲ್ಲಿ ಅಂದು ರಾಜರಾಣಿಯರಾಗಿ ರಂಗದ ಮೇಲೆ ಮೆರೆದವರು ಇಂದು ಬೀದಿಯ ಮೇಲಿದ್ದಾರೆ. ಮಾಲೀಕರಲ್ಲಿ ಹಲವರು ಇದಕ್ಕೆ ಹೊರತಾಗಿಲ್ಲ"[4] ಎನ್ನುತ್ತಾರೆ. ರಂಗಕಲಾವಿದರಿಗೆ, ರಂಗಕಲಾವಿದೆಯರಿಗೆ ತಮ್ಮ ಮುಂದಿನ ಭವಿಷ್ಯದಲ್ಲಿ ಅಭದ್ರತೆ ಕಾಡದಂತೆ ವಿಮೆಯ ವ್ಯವಸ್ಥೆ ಮಾಡಬೇಕಾದುದು ತುರ್ತಾಗಿ ಆಗಬೇಕಾದ ಕೆಲಸ. ಕಂಪನಿ ಮಾಲೀಕರು ಅಥವಾ ಸರ್ಕಾರ ಇದಕ್ಕೆ ನೆರವು ನೀಡುವುದಾದರೆ ಇದು ಅನುಕಂಪದ ಯೋಜನೆ ಎಂದು ಯಾರೂ ಭಾವಿಸಬೇಕಾಗಿಲ್ಲ. ಸಮಾಜದ ಮತ್ತು ಸಂಸ್ಕೃತಿಯ ಭಾಗವಾದ ಈ ರಂಗಕಲಾವಿದರ ನೆರವಿಗೆ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು, ದಾನಿಗಳು, ಕಲಾಸಕ್ತರು ಮುಂದೆ ಬಂದು ಕೈಜೋಡಿಸಿ ಅವರಿಗೆ ವಿಮೆ ಸೌಲಭ್ಯವನ್ನು ಮಾಡಿಸಿಕೊಟ್ಟರೆ ರಂಗದ ಮೇಲಿನ ನಿವೃತ್ತಿಯ ನಂತರ ಅಭದ್ರತೆಯ ಸ್ಥಿತಿಯಲ್ಲಿರುವ ಅವರ ಬದುಕಿಗೆ ಒಂದು ಆತ್ಮವಿಶ್ವಾಸ ಮೂಡಿಸಿದಂತಾಗುತ್ತದೆ. ಕನ್ನಡ ಸಾಹಿತ್ಯ ಸಮ್ಮೇಳನವನ್ನು ರಾಜ್ಯದ ಹಂತದಲ್ಲಿ ಜಿಲ್ಲೆಯ, ತಾಲ್ಲೂಕು ಹಂತದಲ್ಲಿ ಮಾಡುವಂತೆ ಪ್ರತೀ ವರ್ಷ ರಂಗಭೂಮಿಯ ಕುರಿತ ಸಮ್ಮೇಳನಗಳನ್ನು ಆಯೋಜಿಸಿದರೆ ರಂಗಭೂಮಿಗೆ ವಿಶೇಷ ಕಾಯಕಲ್ಪ ದೊರೆತಂತಾಗುತ್ತದೆ. ಇಂಥಹ ಸಮ್ಮೇಳನಗಳಿಗೆ ಈ ಅಧ್ಯಕ್ಷ ಸ್ಥಾನಕ್ಕೆ ಹಿರಿಯ ರಂಗಕಲಾವಿದ, ರಂಗಕಲಾವಿದೆಯರನ್ನು ಆರಿಸಿ ಗೌರವಿಸಿದರೆ, ಅಭಿನಯವನ್ನು ವೃತ್ತಿಯಾಗಿ ಸ್ವೀಕರಿಸಿ ಬಾಳಿದ ಇವರ ಬದುಕಿಗೆ ಜೀವನೋತ್ಸಾಹ ತುಂಬಿದಂತಾಗುತ್ತದೆ. ರಂಗಕಲಾವಿದರ ಮಕ್ಕಳಿಗೆ ಶಾಲಾ ಕಾಲೇಜುಗಳಲ್ಲಿ ಸೀಟುಗಳನ್ನು ಮೀಸಲಿರಿಸಬೇಕು. ಅತಿ ಹೆಚ್ಚು ಶುಲ್ಕ ಭರಿಸಬೇಕಾದ ವೃತ್ತಿಪರ ಕೋರ್ಸುಗಳಲ್ಲಿ ಕಲಾವಿದರ ಮಕ್ಕಳಿಗೆ ಉಚಿತ ಸೀಟುಗಳನ್ನು ವಿಶೇಷವಾಗಿ ಒದಗಿಸಬೇಕು. ವಿದ್ಯಾರ್ಥಿವೇತನ, ಫ್ರೀಶಿಪ್ ಇಂತಹವುಗಳನ್ನು ಆ ಮಕ್ಕಳಿಗೆ ಒದಗಿಸಿಕೊಡಬೇಕು.

ರಂಗಕಲಾವಿದರ ಮಾಸಾಶನವನ್ನು ಹೆಚ್ಚಿಸಬೇಕು. ರಂಗಕಲಾವಿದರಿಗೆ ವಿಮಾ ಸೌಲಭ್ಯಗಳನ್ನು ಪ್ರಾರಂಭಿಸಿ ಅವರು ಬದುಕಿರುವವರೆಗೂ ಅದನ್ನು ವಿಸ್ತರಿಸಬೇಕು. ಆರೋಗ್ಯ ವಿಮೆಯಂತಹ ಸೌಲಭ್ಯಗಳನ್ನು ಅವರಿಗೆ ಒದಗಿಸಿಕೊಡಬೇಕು.

ಆಕಸ್ಮಿಕವಾಗಿ ಅನಾರೋಗ್ಯದಿಂದ ಮಡಿದ ರಂಗಕಲಾವಿದರ ಕುಟುಂಬಗಳ ನೆರವಿಗೆ ಸರ್ಕಾರ ತಕ್ಷಣ ಸ್ಪಂದಿಸಬೇಕು. ಚಲನಚಿತ್ರದಂತಹ ಮಾಧ್ಯಮಗಳಿಗೆ ಸರ್ಕಾರ ನೀಡಿರುವ ಸೌಲಭ್ಯ ಮತ್ತು ಸವಲತ್ತು, ವಿನಾಯತಿಗಳು, ರಂಗಭೂಮಿಗೇಕಿಲ್ಲವೆಂದು ರಂಗಕಲಾವಿದೆ ಆರ್.ನಾಗರತ್ನಮ್ಮ ನಂಥವರು ತಮ್ಮ ಕೃತಿಯಲ್ಲಿ ಪ್ರಶ್ನಿಸಿದ್ದಾರೆ. “ಸಮಾಜ ಉತ್ತೇಜನ ನೀಡದ ಕಲೆಸಾಹಿತ್ಯಗಳಿಗೆ ಸರ್ಕಾರವಾದರೂ ಉಮೇದು ನೀಡಬೇಕು. ಅಪಾರ ಹಣಕಾಸು ವ್ಯವಹಾರದ ಚಲನಚಿತ್ರಗಳಿಗೆ ಸಹಾಯಧನವುಂಟು, ನಗದು ಬಹುಮಾನಗಳುಂಟು, ತೆರಿಗೆ ವಿನಾಯ್ತಿಯುಂಟು, ದೊಡ್ಡ ದೊಡ್ಡ ಪ್ರಶಸ್ತಿಪಾರಿತೋಷಕಗಳುಂಟು. ರಂಗಭೂಮಿಗೇನಿದೆ? ಕಡಿಮೆ ಬಾಡಿಗೆಯ ರಂಗಶಾಲೆಗಳಿಲ್ಲ. ಅನುದಾನವಾಗಲೀ, ಸಹಾಯಧನವಾಗಲೀ, ಪ್ರೋತ್ಸಾಹಕ ಬಹುಮಾನಗಳಾಗಲೀ ಯಾವುದೂ ಇಲ್ಲ. ರಂಗಭೂಮಿ ಮುಂದೆ ಬರುವುದಾದರೂ ಹೇಗೆ? ಉಳಿದುಕೊಳ್ಳುವುದಾದರೂ ಎಂತು?”[5] ಎಂದು ಮಾರ್ಮಿಕವಾಗಿ ಪ್ರಶ್ನಿಸುತ್ತಾರೆ. ಸಮಾಜ, ಸರ್ಕಾರ, ಮನಸ್ಸು ಮಾಡಿ ಈ ರಂಗಕಲೆಯನ್ನು ಉಳಿಸಬೇಕು. ಹಿಂದಿನ ವೈಭವ ವಿಜೃಂಭಣೆಗಳಿಗೆ ಅದನ್ನು ಮತ್ತೆ ಎತ್ತಿ ತರಬೇಕು.

ರಂಗಭೂಮಿಯಲ್ಲಿ ಗಣನೀಯ ಸೇವೆ ಸಲ್ಲಿಸಿ ಕೊಡುಗೆ ಕೊಟ್ಟ ಅದೆಷ್ಟೋ ಮಂದಿ ವಯಸ್ಸಾದಂತೆ ನಿಧಾನವಾಗಿ ತೆರೆಮರೆಗೆ ಸರಿದು ಹೋಗುತ್ತಾರೆ. ಅವರು ಖ್ಯಾತಿಯಿದ್ದ ದಿನಗಳಲ್ಲಿದ್ದಂತೆ ತೆರೆಯ ಮರೆಗೆ ಸರಿದಾಗ ಇರುವುದಿಲ್ಲ. ಯಾಕೆಂದರೆ ನಮಗೆ ಚಲಾವಣೆಯಲ್ಲಿರುವವರು ಮಾತ್ರ ಮುಖ್ಯರಾಗುತ್ತಾರೆ. ಹಿರಿಯರನ್ನು ಪರಂಪರೆಯನ್ನು ನಾವು ನೆನಪಿಸಿಕೊಳ್ಳಬೇಕು. ಎಷ್ಟೋ ಮಂದಿ ಹಿರಿಯ ರಂಗಕಲಾವಿದರು ತೊಂದರೆಯಲ್ಲಿದ್ದಾರೆ. ಅವರನ್ನು ಚಲಾವಣೆಯಲ್ಲಿರುವ ಕಲಾವಿದರು ಚೆನ್ನಾಗಿ ಸಂಪಾದನೆ ಮಾಡುತ್ತಿರುವವರು ಆರ್ಥಿಕವಾಗಿ ಸಹಾಯ ಮಾಡುವ ಮೂಲಕ ಬಾಗಿದ ಅವರ ಬೆನ್ನಿಗೆ ಆಸರೆ ಕಲ್ಪಿಸಬೇಕು. ಆರ್ಥಿಕವಾಗಿ ಸಬಲರಾಗಿರುವ ಸಿನಿಮಾ ಕಲಾವಿದರು, ವಾಣಿಜ್ಯೋದ್ಯಮಿಗಳು, ಸಂಕಷ್ಟದಲ್ಲಿರುವ ರಂಗಕಲಾವಿದ, ರಂಗಕಲಾವಿದೆಯರನ್ನು ದತ್ತು ತೆಗೆದುಕೊಂಡು ಅವರ ಊಟೋಪಚಾರ ಮತ್ತು ಆರೋಗ್ಯ ವೆಚ್ಚಗಳನ್ನು ಭರಿಸುವ ಯೋಜನೆ ಹಾಕಿಕೊಳ್ಳಬೇಕು. ರಂಗಕಲಾವಿದೆ ಗಿರಿಜಾ ಲೋಕೇಶರ ಗಿರಿಜಾ ಪರಸಂಗ ಕೃತಿಯಲ್ಲಿ ಗಿರಿಜಾ ಲೋಕೇಶ್ ಹಿರಿಯ ಕಲಾವಿದರಿಗೆ ಆರ್ಥಿಕ ಭದ್ರತೆಯನ್ನು ಒದಗಿಸಿದುದರ ಬಗ್ಗೆ ವಿವರಗಳಿವೆ. ತಮ್ಮ ಪತಿ ಲೋಕೇಶರು ಬದುಕಿದ್ದ ದಿನಗಳಿಂದಲೇ ಗಿರಿಜಾ ಲೋಕೇಶ್ ಸಂಕಷ್ಟದಲ್ಲಿರುವ ಹಿರಿಯ ಕಲಾವಿದರನ್ನು ದತ್ತು ತೆಗೆದುಕೊಂಡು ಅವರ ಊಟೋಪಚಾರ ಮತ್ತು ಆರೋಗ್ಯದ ಖರ್ಚನ್ನು ನಿಭಾಯಿಸುತ್ತಿದ್ದರು. ಮಹಾ ಸ್ವಾಭಿಮಾನಿಯಾದ ಹಿರಿಯ ನಟ ಕೆ.ಎಸ್.ಅಶ್ವಥ್ ರಂಥವರು ಕೊನೆಯ ದಿನಗಳಲ್ಲಿ ಕಷ್ಟಕ್ಕೀಡಾಗಿದ್ದರು. “ಅವರ ತಿಂಗಳ ವೆಚ್ಚವನ್ನು ಭರಿಸುವುದಕ್ಕೆ ಗಿರಿಜಮ್ಮ ನೆರವಾಗುತ್ತಾ

ಬಂದಿದ್ದರು. ಗಿರಿಜಮ್ಮ ಅದನ್ನು ಎಷ್ಟು ಶಿಸ್ತುಬದ್ಧವಾಗಿ ಮಾಡುತ್ತಿದ್ದರೆಂದರೆ ಲೋಕೇಶ್ ತೀರಿಕೊಂಡ ದಿನದಂದೇ ಅಶ್ವತ್ಥರಿಗೆ ಆ ತಿಂಗಳ ಮೊತ್ತ ತಲುಪಿಸಬೇಕಾಗಿತ್ತು. ಆ ನೋವಿನ ನಡುವೆಯೇ ಅವರು ಚೆಕ್ ಬರೆದು ಕಳುಹಿಸಿ ಕೊಟ್ಟಿದ್ದರು."[6] ಆಗ ಆ ಚೆಕ್ ನೋಡಿ ಅಶ್ವತ್ಥರು ಗಿರಿಜಮ್ಮ ಒಂದು ವರ್ಷ ನನ್ನನ್ನು ಸಾಕಿದ್ದಿ. ಈ ಋಣ ತೀರಿಸಲಾರೆ. ಇನ್ನು ಸಾಕು ಎಂದು ಪತ್ರ ಬರೆದಿದ್ದನ್ನು ಗಿರಿಜಾ ಪರಸಂಗ ಕೃತಿಯ ನಿರೂಪಕ ಜೋಗಿ ಕೃತಿಯಲ್ಲಿ ದಾಖಲಿಸಿದ್ದಾರೆ.

ಒಂದು ಕಾಲದಲ್ಲಿ ಜನಪ್ರಿಯ ನಿರ್ದೇಶಕರಾಗಿದ್ದ ಗೀತಪ್ರಿಯ ಅನಾರೋಗ್ಯ ಮತ್ತು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದಾಗ ಗಿರಿಜಾ ಲೋಕೇಶ್ ನೆರವಾಗಿದ್ದಾರೆ. ವರ್ಷಕ್ಕೆ ಇಂತಿಷ್ಟೇ ಹಣದ ಮಿತಿಯ ನಡುವೆ ಕಲಾವಿದರಿಗೆ ಮಾಸಾಶನ ನೀಡಬೇಕೆಂದು ನಿಯಮಕ್ಕೆ ವಿನಾಯತಿ ತಂದು ಎಲ್ಲಾ ಅರ್ಹ ರಂಗಕಲಾವಿದರಿಗೂ, ರಂಗಕಲಾವಿದೆಯರಿಗೂ ಮಾಸಾಶನ ದೊರಕುವಂತಾದರೆ ಒಳಿತಾಗುತ್ತದೆ. ಹಿರಿಯ ರಂಗಕಲಾವಿದರಿಗೆ ಹೆಚ್ಚು ಜನರಿಗೆ ಆರ್ಥಿಕ ನೆರವು ಬೇಕಾಗಿದೆ. ಕೆಲವರಿಗೆ ಪ್ರೀತಿ ಬೇಕಿರುತ್ತದೆ. ಅವರಿಂದ ಅನೇಕ ವರ್ಷಗಳಷ್ಟು ಕಾಲ ಮನರಂಜನೆ ಪಡೆದ ನಾವು, ಕಿಂಚಿತ್ತಾದರೂ ಅವರ ನೇಪಥ್ಯದ ಬದುಕಿನ ಅಭದ್ರತೆಗೆ ಜೊತೆಯಾಗಬೇಕಿದೆ. ಯಾವ ರಂಗಕಲಾವಿದರಿಗೂ ಆ ಇಳಿಗಾಲದಲ್ಲಿ ಬೇಡುವಂಥಹ ಪರಿಸ್ಥಿತಿ ಬರಬಾರದು. ಈ ನಿಟ್ಟಿನಲ್ಲಿ ಎಲ್ಲರೂ ಜಾಗೃತರಾಗಬೇಕಿದೆ. ರಂಗಕಲಾವಿದರು ಕೈ ಚಾಚಿ ಬೇಡುವ ಮೊದಲೇ ನಾವು ಅವರಿಗೆ ನೆರವಾಗಬೇಕು.

ರಂಗಕಲಾವಿದೆಯರ ವಿಶ್ರಾಂತ ಬದುಕಿನ ಅಭದ್ರತೆಯ ಸ್ಥಿತಿಗೆ ರಂಗಕಲಾವಿದೆ ಪ್ರಮೀಳಾ ಗುಡೂರು ರವರ ಜೀವನದ ವಿವರಗಳನ್ನು ಗಮನಿಸಬಹುದು. "ಕನ್ನಡ ರಂಗಭೂಮಿಗೆ ಅಮೂಲ್ಯ ಕೊಡುಗೆ ನೀಡಿದ ಪ್ರಮೀಳಮ್ಮನವರ ಸದ್ಯದ ಸ್ಥಿತಿ ಚಿಂತಾಜನಕವಾಗಿದೆ. ಪಾರ್ಶ್ವವಾಯುವಿನಿಂದ ಕಾಲುಗಳ ಸ್ವಾಸ್ಥ್ಯ ಕಳೆದುಕೊಂಡು ನಡೆಯಲಾಗದೆ ಮೂಲೆ ಗುಂಪಾಗಿದ್ದಾರೆ. ಆ ಕಲಾವಿದೆಯ ಚಿಕಿತ್ಸೆಗೆ ಸರ್ಕಾರವಾಗಲಿ, ಯಾವುದೇ ಸಂಘಸಂಸ್ಥೆಗಳಾಗಲಿ ನೆರವಿಗೆ ಬರದೆ ಇದ್ದುದು ದುರದೃಷ್ಟಕರ ಸಂಗತಿ. ಆರೂವರೆ ದಶಕಗಳವರೆಗೆ ರಂಗಮಂಟಪದಲ್ಲಿ ನಗುತ್ತ ನಟಿಸಿ, ಪ್ರೇಕ್ಷಕರನ್ನು ನಗಿಸಿ ನಲಿಸಿದ ಪ್ರಮೀಳಮ್ಮನವರ ಬಾಳಿನಲ್ಲಿ ಈಗ ನಗುವಿಲ್ಲ. ಬದಲಾಗಿ ಅಳುವು ತುಂಬಿಕೊಂಡಿರುವುದು ಖೇದಕರ. ತಮ್ಮ ಮನೋಜ್ಞ ಅಭಿನಯದಿಂದ ಸಾಮಾಜಿಕ ಹೃನ್ಮಂದಿರಗಳಲ್ಲಿ ಚಿರಸ್ಥಾಯಿಯಾಗಿ ನೆಲೆಸಿದ ಅವರಿಗೆ ಇರಲು ಸ್ವಂತ ನೆಲೆ(ಸೂರು) ಇಲ್ಲದುದು ದುಃಖದ ವಿಷಯ. ಯಾರ ನೆರವೂ ಇಲ್ಲದೆ, ಸ್ವಾತಂತ್ರ್ಯ ನೆಲೆಯಿಲ್ಲದೆ, ಮಗಳುಅಳಿಯನ ಮನೆಯಲ್ಲಿ ಇರಬೇಕಾಗಿ ಬಂದುದು ಅವರ ದೌರ್ಭಾಗ್ಯವೇ"[7] ಅಲ್ಲದೆ ಮತ್ತೇನು?. ರಂಗಕಲಾವಿದೆಯರ ನಿಸ್ವಾರ್ಥ ಸೇವೆಗೆ, ಕಲೆಯ ಮೂಲಕ ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡಿದ ಅವರ ಅಮೋಘ ಕೊಡುಗೆಗೆ ನಮ್ಮ ಸರ್ಕಾರ ಮತ್ತು

ಇತರೆ ಸಾಂಸ್ಕೃತಿಕ ಸ್ವಯಂ ಸೇವಾ ಸಂಘಸಂಸ್ಥೆಗಳು ತುರ್ತಾಗಿ ಸ್ಪಂದಿಸಬೇಕಾದ ಅಗತ್ಯವಿದೆ. ಅನಾರೋಗ್ಯದಿಂದ ಬದುಕುತ್ತಿರುವ ರಂಗಕಲಾವಿದೆಯರ ಚಿಕಿತ್ಸೆಯ ನೆರವಿಗೆ ಆರ್ಥಿಕ ನೆರವು ದೊರೆತರೆ ಅದರಿಂದ ಅವರು ನೆಮ್ಮದಿಯ ಬದುಕು ಬದುಕಲು ಸಾಧ್ಯವಾಗುತ್ತದೆ. ಬಹುತೇಕ ರಂಗಕಲಾವಿದೆಯರು ಸ್ವಂತ ಸೂರನ್ನು ಪಡೆಯಬೇಕೆಂಬ ಆಸೆ ಕನಸಾಗಿಯೇ ಉಳಿದಿದೆ.

ಕೆಲವರನ್ನು ಮಾತ್ರ ಹೊರತು ಪಡಿಸಿದರೆ ಉಳಿದೆಲ್ಲಾ ಬಹುತೇಕ ಕಲಾವಿದೆಯರ ಕುಟುಂಬಗಳು ಬಡತನವನ್ನು ಅನುಭವಿಸಿದವರು. ಹೀಗಾಗಿ ವಿಶ್ರಾಂತ ಜೀವನ ಬಯಸುವ ರಂಗಕಲಾವಿದರನ್ನು ಕುಟುಂಬಕ್ಕೆ ಭಾರವೆಂದು ಪರಿಗಣಿಸಬಾರದೆಂದರೆ, ಕಲಾವಿದರು ಕುಟುಂಬಕ್ಕೆ ಹೊರೆಯಾಗದಂತೆ ಬದುಕಬೇಕೆಂದರೆ ಅವರಿಗೆ ಕಲಾಪಿಂಚಣಿ ಅಗತ್ಯವಾಗಿ ಬೇಕು. ವಯಸ್ಸಾದ ನಂತರ ರಂಗಕಲಾವಿದರು ಇದುವರೆಗೆ ಅವರು ದುಡಿಮೆಗೆ ಅನುಸರಿಸುತ್ತಿದ್ದ ಕಾರ್ಯಗಳನ್ನು ಮುಂದುವರಿಸುವುದು ಕಷ್ಟ. ಬಹುತೇಕರಿಗೆ ತಮ್ಮದೇ ಆದ ಸ್ವಂತ ಸೂರುಗಳಿಲ್ಲ. ಕೇವಲ ಪಿಂಚಣಿ ಹಣದಿಂದಲೇ ರಂಗಕಲಾವಿದರು ಬದುಕುವಂತಹ ದಯನೀಯ ಸ್ಥಿತಿ ರಂಗಕಲಾವಿದರಿಗೆ ಬರಬಾರದು. ಅದಲ್ಲದೇ ಈ ಕನಿಷ್ಟತಮ ಪಿಂಚಣಿ ಪಡೆಯಲು ರಂಗಕಲಾವಿದರು ಒಂದು ಕಚೇರಿಯಿಂದ ಮತ್ತೊಂದು ಕಚೇರಿಗೆ ಅಲೆಯುವಂತಹ ಸ್ಥಿತಿ ಅಂಗಲಾಚುವ ಸ್ಥಿತಿ ಬರಬಾರದು. ಈ ಅಂಗಲಾಚುವಿಕೆ ಕೇವಲ ವ್ಯಕ್ತಿಗತವಾದುದಲ್ಲ. ಅದು ಕಲಾ ಸಮುದಾಯ ಆಧಾರಿತವಾದುದೆಂಬುದನ್ನು ಸರ್ಕಾರ, ವ್ಯವಸ್ಥೆ ಅರಿತುಕೊಳ್ಳಬೇಕು. ರಂಗಕಲಾವಿದರಿಗೆ ನಿವೃತ್ತಿಯ ಬದುಕಿನಲ್ಲಿ ಕಲೆಯ ಹೆಸರಿನಲ್ಲಿ ಅವರಿಗೆ ಒಂದು ತುತ್ತು ಅನ್ನವನ್ನು ನೆಮ್ಮದಿಯಿಂದ ತಿನ್ನುವುದಕ್ಕೆ ದಾರಿಯಾಗುವ ವ್ಯವಸ್ಥೆಗಳಾಗಬೇಕು. ಹೆತ್ತವರ ಸಾವಿನ ಸುದ್ದಿ ಕೇಳಿದಾಗಲೂ ಮುಖಕ್ಕೆ ಬಣ್ಣ ಹಚ್ಚಲೇಬೇಕಾದ ದುರ್ಭರತೆಯನ್ನು ಅನೇಕ ರಂಗಕಲಾವಿದೆಯರು ನೆನೆಯುತ್ತಾರೆ. ತಾವು ಅಕ್ಷರಶಃ ಅಲೆಮಾರಿಗಳಾಗಿ, ಸಹಜ ಕೌಟುಂಬಿಕ ಜೀವನದಿಂದ ವಂಚಿತರಾಗಿ, ಮಕ್ಕಳ ಶಿಕ್ಷಣಕ್ಕೆ ಅಡಚಣೆಯಾಗಿ, ಮುಖ್ಯವಾಹಿನಿಯಲ್ಲಿ ಬೆರೆಯಲು ಸಾಧ್ಯವಾಗದ ನೋವು ಅನೇಕ ರಂಗಕಲಾವಿದೆಯರನ್ನು ಬಾಧಿಸಿದೆ. ಈ ಕಾರಣಕ್ಕಾಗಿಯೇ ತಮ್ಮ ಮಕ್ಕಳು ಮೊಮ್ಮಕ್ಕಳು ಈ ನಾಟಕ ಕ್ಷೇತ್ರಕ್ಕೆ ಬರುವುದು ಬೇಡವೇ ಬೇಡ ಎಂದು ಅನೇಕರು ಭಾವಿಸಿದ್ದಾರೆ. ಅಭಿನಯವೊಂದು ಬಿಟ್ಟರೆ ಬೇರೇನೂ ಕೆಲಸ ಗೊತ್ತಿಲ್ಲದೇ ಈ ರಂಗಕಲಾವಿದೆಯರ ಬದುಕು ನಿವೃತ್ತಿಯಲ್ಲಿ ಮೂರಾಬಟ್ಟೆಯಾಗಿದೆ. ದಶಕಗಳ ಕಾಲದವರೆಗೆ ವೈಭವಯುತವಾಗಿ ರಂಗದ ಮೇಲೆ ಕಾಣಿಸಿಕೊಂಡ ರಂಗನಟಿಯರ ಖಾಸಗಿ ವೈಯಕ್ತಿಕ ಬದುಕು ವೈಭವಯುತವಾಗಿಲ್ಲ. ಕೆಲವರಂತೂ ಒಂದು ಹೊತ್ತಿನ ಊಟಕ್ಕೂ ಪರಿತಪಿಸುತ್ತಿದ್ದಾರೆ. ಬಹುತೇಕ ರಂಗಕಲಾವಿದೆಯರ ಆತ್ಮಕಥೆಗಳಲ್ಲಿ ದಾಖಲಾಗಿರುವ ವಿವರಗಳನ್ನು ಗಮನಿಸಿದರೆ

ಸಣ್ಣಪುಟ್ಟ ಕೆಲಸ ಮಾಡಿಕೊಂಡು ಬದುಕುತ್ತಿರುವ ಮಕ್ಕಳ ನಡುವೆ ಹೇಗೋ ಕಷ್ಟದಿಂದ ದಿನ ದೂಡುತ್ತಿದ್ದಾರೆ ಎನಿಸುತ್ತದೆ. ಸರ್ಕಾರದ ಮಾಸಾಶನ ಕೆಲವರಿಗೆ ಸಿಕ್ಕಿದ್ದರೂ ಕೂಡ ಅದು ಅವರ ಜೀವನ ನಿರ್ವಹಣೆಗೆ ಸಾಕಾಗದು ಎಂಬ ಅಳಲು ಬಹುತೇಕ ರಂಗಕಲಾವಿದೆಯರದು. ಎಷ್ಟೆಲ್ಲಾ ಕಲಾ ಸಾಧನೆಯನ್ನು ರಂಗಭೂಮಿಯಲ್ಲಿ ಮಾಡಿದ್ದರೂ ಕೂಡ ಮಳವಳ್ಳಿ ಸುಂದರಮ್ಮನಂತಹ ರಂಗಕಲಾವಿದೆಯರು ತಮ್ಮ ಕೊನೆಗಾಲದಲ್ಲಿ ಅಪರಿಚಿತರಂತೆ ಬದುಕಿದ್ದಾರೆ. ಶಾಂತಾ ಹುಬ್ಳೀಕರ್ ರಂತಹ ಕಲಾವಿದೆಯರು ಇನ್ನೂ ಬದುಕಿದ್ದರು ಎಂಬ ವಿಷಯ ನಮ್ಮ ಸಾಂಸ್ಕೃತಿಕ ಲೋಕಕ್ಕಾಗಲೀ, ಮಾಧ್ಯಮಗಳಿಗಾಗಲೀ ಬಹಳಷ್ಟು ವರ್ಷಗಳ ಕಾಲ ಗೊತ್ತಿರಲಿಲ್ಲ ಎಂಬ ವಿಷಯ ಸಾಂಸ್ಕೃತಿಕ ಕ್ಷೇತ್ರದ ನಿರ್ಲಕ್ಷ್ಯತೆಯನ್ನು ಸಾರುತ್ತದೆ.

**ಕೊನೆ ಟಿಪ್ಪಣಿಗಳು:**

1. ಸೀತಾರಾಮಯ್ಯ ಹ.ವೆಂ., ಗುಡಿಹಳ್ಳಿ ನಾಗರಾಜ (ಪರಿಷ್ಕರಣೆ), (1975), ಅಭಿನಯ ವಿಶಾರದೆ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, ಪು.ಸಂ. 70
2. ಗಿರಡ್ಡಿ ಗೋವಿಂದರಾಜ ಮತ್ತು ಚಂದ್ರಕಾಂತ ಕುಸನೂರ (ಸಂಪಾದನೆ), (1980), ಹವ್ಯಾಸಿ ರಂಗಭೂಮಿಯ ಸಮಸ್ಯೆಗಳು, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, ಪು.ಸಂ. 21
3. ಅದೇ, ಪು.ಸಂ. 37
4. ಗುಡಿಹಳ್ಳಿ ನಾಗರಾಜ, (1999), ಚಿಂದೋಡಿ ಲೀಲಾ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, ಪು.ಸಂ. 45
5. ಭಾಗ್ಯಲಕ್ಷ್ಮಿ ಪದಕಿ, (2009), ಜೀವನವೆಂಬುದು ನಾಟಕವಲ್ಲ... ಇದೇ ಬೇರೆ ಆಟ!, ಸಿ.ವಿ.ಜಿ. ಪಬ್ಲಿಕೇಶನ್, ಬೆಂಗಳೂರು, ಪು.ಸಂ. 126
6. ಜೋಗಿ, (2021), ಗಿರಿಜಾ ಪರಸಂಗ, ಅಂಕಿತ ಪುಸ್ತಕ, ಬೆಂಗಳೂರು, 296
7. ಮುರ್ತುಜಾ ಬ. ಒಂಟಿ, (2016), ಪ್ರಮೀಳಾ ಗುಡೂರು, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, ಪು.ಸಂ.85

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.